# ನಾಸೀರ್ ಹುಸೇನ್‌ಗೆ ಬಳ್ಳಾರಿಗೆ ಪ್ರವೇಶ ಇಲ್ಲ ರಾಯಲ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರ ಬಂಧನ



ಬಳ್ಳಾರಿ ಏ : ಬಳ್ಳಾರಿ ನಗರದ ರಾಯಲ್ ವೃತ್ತದಲ್ಲಿ ಭಾನುವಾರ ರಾಜ್ಯಸಭಾ ಸದಸ್ಯರಾದ ನಾಸೀರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ ಪರ ಘೋಳಣೆ ಕೂಗಿರುವುದನ್ನು ವಿರೋಧಿಸಿ ಬಿಜೆಪಿ ಪಕ್ಷದ ವತಿಯಿಂದ ಸಂಸದ ನಾಸೀರ್ ಹುಸೇನ್ ಗೋ ಬ್ಯಾಕ್ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾಧ್ಯಕ್ಷರಾದ ಅನಿಲ್ ಕುಮಾರ್ ಮೋಕ ಅವರು ಮಾತನಾಡಿ ವಿಧಾನಸೌಧದಲ್ಲಿ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಸಂಸದ ನಾಸೀರ್ ಹುಸೇನ್ ಅವರ ಬೆಂಬಲಿಗರು ಪಾಕ್ ಪರ ಘೋಳಣೆ ಕೂಗಿದ್ದು ದೇಶದ್ರೋಹಿ ಹೇಳಿಕೆ ನೀಡಿದವರಿಗೆ ಬೆಂಬಲ ನೀಡುವುದು ಸರಿಯಲ್ಲ, ನಾಸೀರ್ ಹುಸೇನ್ ಕ್ಷಮಾಪಣೆ ಸಹ ಕೇಳಿಲ್ಲ ಅಂತಹ ಸಂದರ್ಭದಲ್ಲಿ ಸಂಸದ ನಾಸೀರ್ ಹುಸೇನ್ ಅವರಿಗೆ ಬಳ್ಳಾರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತ ನೀಡುವುದು ಸರಿಯಲ್ಲ ನಾಸೀರ್ ಹುಸೇನ್ ಅವರಿಗೆ ಬಳ್ಳಾರಿಗೆ ಪ್ರವೇಶ ಇಲ್ಲ ಎಂದರು. ಇದೇ ವೇಳೆ ರಾಯಲ್ ವೃತ್ತದಲ್ಲಿ ಬೈಕ್ ರ್‍ಯಾಲಿಗೆ ಹೋಗುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಬಿಜೆಪಿ ಕಾರ್ಯಕರ್ತರು ತಡೆಯಲು ಪ್ರಯತ್ನಿಸಿದ ವೇಳೆ ಪೊಲೀಸರು ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿದರು. ಈ ವೇಳೆ ಪೊಲೀಸರಿಗೆ ಮತ್ತು ಬಿಜೆಪಿ ಕಾರ್ಯಕರ್ತರಿಗೆ ಮಾತಿನ ಚಕಮಕಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀನಿವಾಸ್ ಮೋತ್ಕರ್, ಹನುಮಂತಪ್ಪ,ಅಡವಿ ಸ್ವಾಮಿ, ಸೋಮನಗೌಡ, ಸುಗುಣಾ, ಅಲಿವೇಲಮ್ಮ, ಸೇರಿದಂತೆ ಮತ್ತಿತರರು ಇದ್ದರು.

# ಮುಂದಿನ 24 ಗಂಟೆಗಳಲ್ಲಿ ಈ ಜಿಲ್ಲೆಗಳಲ್ಲಿ ಮಳೆ?

ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, ಕರ್ನಾಟಕದ ಹಲವು ಜಿಲ್ಲೆಗಳ ಜನರಿಗೆ ಮಳೆಯ ಖುಷಿ ಸಿಗಲಿದೆ. ಮಲೆನಾಡು ಭಾಗ ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು ಸೇರಿದಂತೆ, ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ, ಹಾವೇರಿಯಲ್ಲಿ ಭರ್ಜರಿಯಾಗಿ ಮಳೆ ಸುರಿಯಲಿದೆ ಎನ್ನಲಾಗಿದೆ. ಇನ್ನು ಉತ್ತರ ಕರ್ನಾಟಕದ ವಿಜಯಪುರ, ವಿಜಯನಗರ, ಗದಗ, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಬೆಳಗಾವಿ, ರಾಯಚೂರು, ಬೀದರ್, ಕಲಬುರಗಿ, ವಿಜಯಪುರ ಜಿಲ್ಲೆಗಳಲ್ಲಿ ಭಾರಿ ಮಳೆ ಬೀಳಲಿದೆ ಎನ್ನಲಾಗಿದೆ. ಮುಂದಿನ 24 ಗಂಟೆಗಳಲ್ಲಿ ಈ ಜಿಲ್ಲೆಗಳಲ್ಲಿ ಭರ್ಜರಿ ಮಳೆ ಆಗಲಿದೆ.

ಮಳೆಗಾಗಿ ಕಾದು ಕುಳಿತಿದ್ದ ಕನ್ನಡಿಗರಿಗೆ ಮಳೆರಾಯ ಸಿಹಿ ಸುದ್ದಿ ನೀಡಿದ್ದಾನೆ. ಇಂದು ಕೂಡ, ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಭಾರಿ ಮಳೆಯು ಬಿದ್ದಿದೆ. ಮಲೆನಾಡು ಭಾಗ ಚಿಕ್ಕಮಗಳೂರು ಸೇರಿದಂತೆ ಕೊಡಗು ಮತ್ತು ಶಿವಮೊಗ್ಗದಲ್ಲಿ ಭರ್ಜರಿ ಮಳೆ ಬಂದಿದೆ. ಮತ್ತೊಂದು ಕಡೆ ಉತ್ತರ ಕರ್ನಾಟಕದ ಗದಗ, ಬೆಳಗಾವಿ, ಬಾಗಲಕೋಟೆ, ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳ ಜನ ಭರ್ಜರಿ ಮಳೆಯಿಂದ ಖುಷಿಯಾಗಿದ್ದಾರೆ. ಅದರಲ್ಲೂ ನಿನ್ನೆ ಶಿವಮೊಗ್ಗದಲ್ಲಿ ಭಾರಿ ಮಳೆಯ ಸಿಂಚನ ಆಗಿದೆ.

ಎಲ್ಲಾ ಕಡೆ ಒಣ ಭೂಮಿ ಕಾಣುತ್ತಿದ್ದು, ಮಳೆ ಇಲ್ಲದೆ ಭೂಮಿ ಸಂಪೂರ್ಣ ಒಣಗಿ ಹೋಗಿ ಜನ ಪರದಾಡುತ್ತಿದ್ದರು. ಇದೆಲ್ಲವೂ ಮನುಷ್ಯ ಮಾಡುತ್ತಿರುವ ಎಡವಟ್ಟು & ಅಹಂಕಾರ ಫಲಿತಾಂಶ ಎನ್ನಬಹುದು. ಹೀಗಾಗಿ ಬೇಸಿಗೆ ಆರಂಭದ ಸಮಯದಲ್ಲೇ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ನೀರೇ ಇಲ್ಲದೆ ಜನರು ಪರದಾಡಿದರು. ಆದರೂ ಕಳೆದ ಕೆಲವು ದಿನಗಳಿಂದ ಮಳೆಯ ಆರ್ಭಟವು ಶುರು ಆಗಿದ್ದು, ಭರ್ಜರಿ ಮಳೆ ಬೀಳುತ್ತಿದೆ. ಹೀಗಾಗಿ ನೀರಿನ ಸಮಸ್ಯೆ ಒಂದಷ್ಟು ಕಡಿಮೆಯು ಆಗುತ್ತಿದೆ. ಗುಡುಗು ಸಹಿತ ಭರ್ಜರಿ ಮಳೆ ಈಗ ಹವಾಮಾನ ಇಲಾಖೆ ತಿಳಿಸಿರುವ ಪ್ರಕಾರ ಮುಂದಿನ 24 ಗಂಟೆ ಅವಧಿ ಒಳಗಾಗಿ ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ ಸೇರಿದಂತೆ ಸುತ್ತಮುತ್ತ ಪ್ರದೇಶದಲ್ಲಿ ಭಾರಿ ಮಳೆ ಬೀಳಲಿದೆ ಎನ್ನಲಾಗಿದೆ. ಹಾಗೂ ಮುಂದಿನ 24 ಗಂಟೆ ಅವಧಿಯಲ್ಲಿ, ಭರ್ಜರಿ ಮಳೆಯಾಗುತ್ತದೆ ಅಂತಾ ಹೇಳಲಾಗುತ್ತಿದೆ. ಆ ಪ್ರಕಾರ ಗುಡುಗು ಸಹಿತ ಭರ್ಜರಿ ಮಳೆ ಬೀಳುವ ಬಗ್ಗೆ ಇದೀಗ ಮುನ್ಸೂಚನೆ ಸಿಗುತ್ತಿದ್ದು, ಜನರು ಕೂಡ ಬಿಸಿಲಿನ ಬೇಗೆಯಿಂದ ಒಂದಷ್ಟು ರಿಲೀಫ್ ಅನ್ನ ಪಡೆಯುತ್ತಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕದ ಜನರು ಬಿಸಿಲಿನ ಬೇಗೆಯಲ್ಲಿ ಬೆಂದು ಹೋಗಿದ್ದರು. ಮಳೆ ಇಲ್ಲದೆ ಪರದಾಡುವ ಪರಿಸ್ಥಿತಿಯಲ್ಲಿ ಭಾರಿ ಮಳೆ ಬಂದು ಒಂದಷ್ಟು ನೆಮ್ಮದಿ ನೀಡುತ್ತಿದೆ.

# ಮತದಾನ : ನೋಟಾ ಎಂದರೇನು?

ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಮತ ಚಲಾಯಿಸಲು ಯಾರೂ ಅರ್ಹರಲ್ಲ ಎಂದೆನಿಸಿದರೆ ಮತದಾರರು ಇವರು ಯಾರು ಇಷ್ಟವಿಲ್ಲ ಎಂಬುದನ್ನು ವ್ಯಕ್ತಪಡಿಸಲು 'ನೋಟಾ'ದ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಇತ್ತೀಚೆಗಿನ ವರ್ಷಗಳಲ್ಲಿ ಒಂದಷ್ಟು ಮತಗಳು ಬೀಳುತ್ತಿರುವುದು ಗಮನಾರ್ಹವಾಗಿದೆ. ರಾಜಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅವ್ಯವಹಾರ, ಅಧಿಕಾರ ದುರುಪಯೋಗ ಹೀಗೆ ಹಲವು ಕಾರಣಗಳಿಗೆ ರೋಸಿ ಹೋಗಿರುವ ಮತದಾರರು ತಮ್ಮ ಕ್ಷೇತ್ರದ ಅಭ್ಯರ್ಥಿಗಳ ಬಗ್ಗೆ ಅಸಮಾಧಾನಗೊಂಡು 'ನೋಟ' ದತ್ತ ಬೆರಳನ್ನು ಒತ್ತುತ್ತಿದ್ದಾರೆ. ಐದು ವರ್ಷಕ್ಕೊಮ್ಮೆ ನಡೆಯುವ ಪ್ರತಿ ಚುನಾವಣೆಯೂ ಪ್ರಜೆಗಳಿಗೆ ನೀಡುವ ಹಕ್ಕು ಆಗಿದ್ದು, ಇದರಿಂದ ತಮಗಿಷ್ಟವಿಲ್ಲದ ಪ್ರತಿನಿಧಿಯನ್ನು ಅಥವಾ ಅಧಿಕಾರದಲ್ಲಿರುವವರನ್ನು ಬದಲಾಯಿಸಲು ಈ ಚುನಾವಣೆ ಸಹಕಾರಿಯಾಗಿದೆ. ಆದರೆ ಈ ಚುನಾವಣೆಯ ಮಹತ್ವವನ್ನು ಅರಿತು ಪ್ರತಿಯೊಬ್ಬರೂ ಇದನ್ನು ತಮ್ಮ ಕರ್ತವ್ಯ ಎಂಬಂತೆ ಪಾಲಿಸಿ ಮತ ಚಲಾಯಿಸಿದರೆ ನಮ್ಮ ದೇಶದ ಪ್ರಜಾ ಪ್ರಭುತ್ವ ಗಟ್ಟಿಯಾಗಲು ಸಾಧ್ಯವಾಗುತ್ತದೆ. ಆದರೆ ಎಲ್ಲೋ ಒಂದು ಕಡೆ ಇನ್ನೂ ಕೂಡ ಬಹುತೇಕರು ಮತ ಚಲಾಯಿಸುವತ್ತ ನಿರ್ಲಕ್ಷ್ಯ ವಹಿಸುತ್ತಿರುವುದು ಬೇಸರದ ಸಂಗತಿಯಾಗಿದೆ. ಲೋಕಸಭಾ ಚುನಾವಣೆ 2024 ಲೋಕಸಭಾ ಕ್ಷೇತ್ರಗಳು । ಅಭ್ಯರ್ಥಿಗಳು । ಚುನಾವಣಾ ದಿನಾಂಕ ಇವತ್ತು ಬಹಳಷ್ಟು ಜನರಿಗೆ ರಾಜಕೀಯದ ಬಗ್ಗೆ ಒಲವಿಲ್ಲ ಹೀಗಾಗಿ ನೀರಸಭಾವ ತೋರುತ್ತಾರೆ.

ಆದರೆ ಈ ದೇಶದ ಆಗುಹೋಗುಗಳ ಬಗ್ಗೆ ಒಬ್ಬ ಪ್ರಜೆಯಾಗಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಜತೆಗೆ ಸಂವಿಧಾನಬದ್ಧವಾಗಿ ನೀಡಿರುವ ಹಕ್ಕನ್ನು ಚಲಾಯಿಸಬೇಕು. ಅಷ್ಟು ಮಾಡದೆ ಹೋದರೆ ನಾವು ಈ ದೇಶದ ಪ್ರಜೆ ಎನ್ನುವುದಕ್ಕೆ ಅರ್ಹರಾಗುವುದಿಲ್ಲ. ನೋಟಾ ಎಂದರೇನು ಗೊತ್ತಾ? ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಆಡಳಿತ ನಡೆಸುವವರು ದೇಶದ ಬದ್ಧತೆಗೆ ತಕ್ಕಂತೆ ಆಡಳಿತ ನಡೆಸುತ್ತಿಲ್ಲ ಎನ್ನುವುದಾದರೆ ಅವರನ್ನು ಕಿತ್ತೊಗೆಯುವ ಶಕ್ತಿ ಪ್ರಜೆಗಳಾದ ನಮಗಿದೆ. ನಮ್ಮ ಮತಕ್ಕೂ ಒಂದು ಸರ್ಕಾರವನ್ನು ತೊಲಗಿಸುವ ಶಕ್ತಿಯಿದೆ. ಇದನ್ನು ಪ್ರತಿಯೊಬ್ಬ ಪ್ರಜೆಯೂ ಅರಿತುಕೊಂಡು ಅದನ್ನು ಹೆಂಡ, ಹಣಕ್ಕೆ ಮಾರಿಕೊಳ್ಳದೆ, ಇರುವ ಅಭ್ಯರ್ಥಿಗಳ ನಡುವೆ ಯೋಗ್ಯನನ್ನು ಆರಿಸುವ ನಿರ್ಧಾರ ಮಾಡಿದರೆ ಒಂದೊಳ್ಳೆಯ ಪ್ರಜಾಪ್ರಭುತ್ವ ಸ್ಥಾಪನೆಗೆ ಸಾಧ್ಯವಾಗುತ್ತದೆ. ಅಯ್ಯೋ ನಮ್ಮ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದವರು ಯಾರೂ ಅರ್ಹರಲ್ಲ ಹಾಗಾಗಿ ಮತ ಹಾಕೋಕೆ ಇಷ್ಟವಿಲ್ಲವೆಂದು ಮಾತನಾಡುವವರಿಗೆ ಕೊರತೆಯಿಲ್ಲ. ಇಂತಹವರ ಪೈಕಿ ಕೆಲವರು ಮತಕೇಂದ್ರಕ್ಕೆ ಹೋಗುವುದೇ ಇಲ್ಲ. ಆದರೆ ಪ್ರಜ್ಞಾವಂತ ಕೆಲವರು ತಮ್ಮ ಹಕ್ಕನ್ನು ನೋಟಕ್ಕೆ ಚಲಾಯಿಸುತ್ತಾರೆ. ಇಂತಹದೊಂದು ಅವಕಾಶವನ್ನು ಕಳೆದೊಂದು ದಶಕದಿಂದೀಚೆಗೆ ಚುನಾವಣಾ ಆಯೋಗ ಮಾಡಿಕೊಟ್ಟಿದೆ. ಅದರಂತೆ ರಾಜಕೀಯ ಪಕ್ಷಗಳು ಕಣಕ್ಕಿಳಿಸಿರುವ ಅಥವಾ ಪಕ್ಷೇತರವಾಗಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಯಾರೂ ನಮಗೆ ಅರ್ಹರಲ್ಲ ಎಂದೆನಿಸಿದರೆ ನೋಟಾ ಕ್ಕೆ ಮತ ಚಲಾಯಿಸಬಹುದಾಗಿದೆ. 2013ರಲ್ಲಿ ನೋಟಾ ಜಾರಿಗೆ ಬಂತು ಇದೊಂದು ರೀತಿಯಲ್ಲಿ ಮತದಾರರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವ ಮಾರ್ಗವಾಗಿಯೂ ಗೋಚರಿಸುತ್ತಿದೆ. 2013ರಲ್ಲಿ ಸುಪ್ರೀಂಕೋರ್ಟ್ ಸೂಚನೆಯಂತೆ ಪಂಚ ರಾಜ್ಯ ಚುನಾವಣೆಯಲ್ಲಿ ಮತದಾರರಿಗೆ ನೋಟಾ ಆಯ್ಕೆಗೆ ಅವಕಾಶ ಮಾಡಿಕೊಡಲಾಯಿತು. ತದನಂತರದ ಚುನಾವಣೆಗಳಲ್ಲಿ ಇದಕ್ಕೆ ಅವಕಾಶ ಮಾಡಿಕೊಡಲಾಗಿದ್ದು, ಮತ ಯಂತ್ರ(ಇವಿಎಂ)ದ ಕೊನೆಯಲ್ಲಿ ನೋಟಾ ಗೆ ವ್ಯವಸ್ಥೆ ಮಾಡಲಾಗಿದೆ. ಚುನಾವಣಾ ಕರ್ತವ್ಯದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂಬುದು ನಿಮಗೆ ತಿಳಿದಿದೆಯೇ? ನೋಟಾ ಜಾರಿಗೆ ಬಂದ ನಂತರ ಮತದಾರರು ಕ್ಷೇತ್ರದಲ್ಲಿ ಕಣಕ್ಕಿಳಿಸಿರುವ ಅಭ್ಯರ್ಥಿಗಳು ಯಾರೂ ಅರ್ಹರಲ್ಲ ಎಂಬುದನ್ನು ಸಾಬೀತುಪಡಿಸುವ ಒಂದು ಪ್ರತಿಭಟನೆಯನ್ನು ನೋಟಾಗೆ ಮತ ಚಲಾಯಿಸುವ ಮೂಲಕವೇ ಮಾಡುತ್ತಿದ್ದಾರೆ. ಇದೊಂದು ರೀತಿಯಲ್ಲಿ ರಾಜಕೀಯ ಪಕ್ಷಕ್ಕೆ ಮತ್ತು ಸ್ಪರ್ಧಿಸುವ ಅಭ್ಯರ್ಥಿಗಳಿಗೊಂದು ಸಂದೇಶ ಎಂದರೂ ತಪ್ಪಾಗಲಾರದು. ಹಾಗಾದರೆ ಇದರಿಂದ ಏನು ಪ್ರಯೋಜನ ಎಂಬ ಪ್ರಶ್ನೆ ಪ್ರತಿಯೊಬ್ಬರ ಮನದಲ್ಲಿ ಮೂಡದಿರದು. ಯಾವಾಗ ನೋಟಾಗೆ ಮತ ಹಾಕ್ತಾರೆ? ಇದಕ್ಕೆ ಉತ್ತರವಾಗಿ ಹೇಳುವುದಾದರೆ ದೇಶದ ಪ್ರಜೆಗಳಾದ ನಮಗೆ ಸಂವಿಧಾನದಲ್ಲಿ ಮತ ನೀಡುವ ಹಕ್ಕನ್ನು ನೀಡಲಾಗಿದೆ. ಈ ಮತಕ್ಕೆ ತನ್ನದೇ ಮಹತ್ವವಿದೆ. ಒಂದೇ ಒಂದು ಮತವೂ ನಿರ್ಣಾಯಕವಾಗಿದ್ದು, ಅದು ಸೋಲು ಗೆಲುವಿನ ಲೆಕ್ಕಾಚಾರವನ್ನು ಮಾಡಲಿದೆ. ಆದರೆ ಕಣದಲ್ಲಿರುವ ಅಭ್ಯರ್ಥಿ ಆಯ್ಕೆಗೆ ಸೂಕ್ತವಲ್ಲ ಎಂಬುದನ್ನು ಮತದಾರ ನಿರ್ಧಾರ ಮಾಡಿದರೆ ಆತ ಮತದಾನದಿಂದ ದೂರ ಉಳಿಯುವ ಸಾಧ್ಯತೆಯಿದೆ. ಹೀಗಾಗಿ ಈ ದೇಶದ ಪ್ರಜೆಯಾಗಿ ಯಾರೊಬ್ಬರೂ ಮತದಾನದಿಂದ ದೂರ ಉಳಿಯದೆ ತನ್ನ ಹಕ್ಕನ್ನು ಚಲಾಯಿಸಲು ಮತ್ತು ಆ ಮೂಲಕ ತನ್ನ ಅಭಿಪ್ರಾಯವನ್ನು ತಿಳಿಸಲು ನೋಟಾ ಉಪಯುಕ್ತವಾಗಿದೆ. ಇನ್ನು ಈ ನೋಟಾಗೆ ಮಹತ್ವವಿದೆಯಾ? ಇದನ್ನು ಪರಿಗಣಿಸಲಾಗುತ್ತದೆಯಾ? ಎಂಬುದನ್ನು ನೋಡುವುದಾದರೆ ಮೊದ ಮೊದಲು ಇದಕ್ಕೆ ಅಂತಹ ಮಹತ್ವವೇನು ಇರಲಿಲ್ಲ. ಅದನ್ನು ಅಕ್ರಮ ಮತವೆಂದೇ ಪರಿಗಣನೆ ಮಾಡಲಾಗುತ್ತಿತ್ತು. ಆದರೆ ಆ ಬಳಿಕ ನೋಟಾಗೆ ಹೆಚ್ಚಿನ ಮತ ಚಲಾವಣೆಯಾದರೆ ಅದಕ್ಕಿಂತ ಕಡಿಮೆ ಮತ ಪಡೆದ, ಅಂದರೆ ಎರಡನೇ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ವಿಜೇತ ಎಂದು ಘೋಷಿಸುವ ತೀರ್ಮಾನ ಮಾಡಲಾಯಿತು. 2018ರಲ್ಲಿ ನೋಟಾಗೆ ಸ್ಥಾನಮಾನ 2018ರ ಡಿಸೆಂಬರ್ ನಲ್ಲಿ ಹರಿಯಾಣದ ಐದು ಜಿಲ್ಲೆಗಳಲ್ಲಿ ಮುನ್ಸಿಪಲ್ ಚುನಾವಣೆ ನಡೆದಾಗ ಅಲ್ಲಿನ ಅಭ್ಯರ್ಥಿಗಳ ವಿರುದ್ಧ ಅಸಮಾಧಾನಗೊಂಡಿದ್ದ ಮತದಾರರು ನೋಟಾಗೆ ಅತಿ ಹೆಚ್ಚು ಮತಗಳನ್ನು ಹಾಕಿದ್ದರು. ಹೀಗಾಗಿ ಅನ್ಯ ಮಾರ್ಗವಿಲ್ಲದೆ ಎಲ್ಲಾ ಅಭ್ಯರ್ಥಿಗಳು ಅನರ್ಹರು ಎಂದು ಘೋಷಣೆ ಮಾಡಲಾಯಿತು. ಇದೊಂದು ಪ್ರಕರಣ ನೋಟದ ಮಹತ್ವವನ್ನು ಇಡೀ ದೇಶಕ್ಕೆ ಸಾರಿತ್ತು. ಆ ನಂತರ ಅನ್ಯ ಮಾರ್ಗವಿಲ್ಲದೆ ಚುನಾವಣಾ ಆಯೋಗ ಮರು ಚುನಾವಣೆ ನಡೆಸಲು ಆದೇಶ ನೀಡಿತ್ತು. ಅದೇ ವರ್ಷ(2018)ದಿಂದ ದೇಶದಲ್ಲಿ ಮೊದಲ ಬಾರಿಗೆ ನೋಟಾಗೂ ಅಭ್ಯರ್ಥಿಯ ಸರಿಸಮನಾದ ಸ್ಥಾನಮಾನವನ್ನು ನೀಡಲಾಯಿತು. ಇನ್ನೊಂದೆಡೆ ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗದ 2018ರಲ್ಲಿ ಹೊರಡಿಸಿದ ಆದೇಶದ ಪ್ರಕಾರ ನೋಟಾಗೆ ಕಾಲ್ಪನಿಕ ಚುನಾವಣಾ ಅಭ್ಯರ್ಥಿ ಸ್ಥಾನಮಾನವನ್ನು ನೀಡಲಾಗಿದ್ದು, ಸ್ಪರ್ಧಿಸಿರುವ ಅಭ್ಯರ್ಥಿಗಳಿಗಿಂತ ನೋಟಾಕ್ಕೆ ಹೆಚ್ಚು ಮತ ಬಿದ್ದರೆ ಮತ್ತೆ ಚುನಾವಣೆ ನಡೆಸಲಾಗುವುದು. ಒಂದು ವೇಳೆ ಮರು ಚುನಾವಣೆಯಲ್ಲಿಯೂ ಯಾವುದೇ ಅಭ್ಯರ್ಥಿ ನೋಟಾಕ್ಕಿಂತ ಹೆಚ್ಚಿನ ಮತಗಳನ್ನು ಪಡೆಯಲು ಸಾಧ್ಯವಾಗದಿದ್ದರೆ, ಮೂರನೇ ಬಾರಿಗೆ ಚುನಾವಣೆ ನಡೆಯುವುದಿಲ್ಲ. ಬದಲಿಗೆ ನೋಟಾ ನಂತರ ಹೆಚ್ಚು ಮತಗಳನ್ನು ಪಡೆದ ಅಭ್ಯರ್ಥಿಯನ್ನು ವಿಜೇತ ಎಂದು ಘೋಷಿಸಲಾಗುತ್ತದೆ. ಸದ್ಯ ಇದು ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗದ ನಿಯಮವಾಗಿರುವುದರಿಂದ ಆ ರಾಜ್ಯಕ್ಕಷ್ಟೆ ಸೀಮಿತವಾಗಿದೆ. ಮತದಾನ ಮಾಡುವುದು ನಮ್ಮ ಹಕ್ಕು ಇಂತಹದೊಂದು ಸಂದರ್ಭಗಳು ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸಂಭವಿಸಬಹುದಷ್ಟೆ. ವಿಧಾನಸಭೆ, ಲೋಕಸಭಾ ಚುನಾವಣೆಗಳಲ್ಲಿ ಸಂಭವಿಸುವುದು ತೀರಾ ವಿರಳ ಎಂದೇ ಹೇಳಬಹುದು. ಆದರೆ ಈ ಚುನಾವಣೆಗಳಲ್ಲಿ ನೋಟಾಕ್ಕೆ ಎಷ್ಟು ಮತಗಳು ಬಿದ್ದಿವೆ ಎಂಬುದು ಆ ಕ್ಷೇತ್ರದ ಅಭ್ಯರ್ಥಿಗಳ ವ್ಯಕ್ತಿತ್ವಕ್ಕೆ ಹಿಡಿಯುವ ಕನ್ನಡಿಯಾಗಬಹುದು. ಅದು ಏನೇ ಇರಲಿ ಮತದಾರರು ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದು ತಮಗಿಷ್ಟವಾದ ಅಭ್ಯರ್ಥಿಗೋ. ನೋಟಾಕ್ಕೋ ಯಾವುದೋ ಒಂದಕ್ಕೆ ಅದನ್ನು ಚಲಾಯಿಸುವ ಕೆಲಸವನ್ನು ತಪ್ಪದೇ ಮಾಡಬೇಕಷ್ಟೆ.

(ಕೃಪೆ:ಒನ್ ಇಂಡಿಯಾ)

# ಖೋಟಾ ನೋಟು ಪ್ರಿಂಟ್ ಮಾಡುತ್ತಿದ್ದ ಬಿಸಲಳ್ಳಿಯ ಇಬ್ಬರ ಬಂಧನ

## 100 ನೋಟ್ ಮುದ್ರಣ, * ಬ್ಯಾಂಕ್ ಆಫ್ ಬರೋಡದಲ್ಲಿ ಕೆಲಸ * ನಗರದ ಲಾಡ್ಜ್ ನಲ್ಲಿ ಮುದ್ರಣ * ಕಲರ್ ಜೆರಾಕ್ಸ್ ನಂದ ಮುದ್ರಣ * ಗಾಂಧಿನಗರ ಪೊಲೀಸರಿಂದ ಬಂಧನ





ಬಳ್ಳಾರಿ, ಏ.: ದಿನಾಲು ಬ್ಯಾಂಕಿನಲ್ಲಿ ಹಣದ ವಹಿವಾಟು ನೋಡಿದ್ದ ಬ್ಯಾಂಕ್ ಆಫ್ ಬರೋಡದ ಗುತ್ತಿಗೆ ನೌಕರ ಖೋಟಾ ನೋಟ್ ಮುದ್ರಿಸಿ ಚಲಾಯಿಸಿದರೆ ಹೇಗೆಂದು ಕಲರ್ ಜೆರಾಕ್ಸ್ ಮಾಡಲು ಮುಂದಾಗಿದ್ದು. ಆತನ ಜೊತೆ ಮತ್ತೊಬ್ಬ ಸೇರಿದ್ದ. ಈ ಇಬ್ಬರನ್ನು ನಿನ್ನೆ ಸಂಜೆ ಗಾಂಧಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನಗರದ ಹೊರವಲಯದ ಬಿಸಲಳ್ಳಿ ಗ್ರಾಮದ ಹರಿಜನ ಕೇರಿಯ ಕೊಲ್ಲಾಪುರಮ್ಮ ದೇವಸ್ಥಾನದ ಬಳಿ ನಿವಾಸಿಗಳಾದ ಗಂಗಣ್ಣನ ಮಗ ಎ.ಕೆ.ಬಸವರಾಜ್ ಅಲಿಯಾಸ್ ಅಶೋಕ್(25) ಈತ ಬ್ಯಾಂಕ್ ಆಫ್ ಬರೋಡದಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದ.ಈತನನ್ನು ಮತ್ತು ಇದೇ ಪ್ರದೇಶದ ನಿವಾಸಿ ಹೊನ್ನೂರಸ್ವಾಮಿಯವರ ಮಗ ಹರೀಶ್ (25) ನನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ಹಳೇ ಬಸ್ ನಿಲ್ದಾಣದ ಮುಂಭಾಗದ ಕೊಲಚಲಂ ಕಾಂಪೌಂಡಿನ ಮೋಹನ್ ಲಾಡ್ಜ್ ನಲ್ಲಿ ನೋಟು ಮುದ್ರಿಸುವಾಗ ಬಂಧಿಸಲಾಗಿದೆ.ಬಂಧಿತರಿಂದ 100 ರೂ ಮುಖ ಬೆಲೆಯ 80 ನೋಟ್, ಜೆರಾಕ್ಸ್ ಯಂತ್ರ ಮತ್ತಿತರೇ ಸಾಮಾಗ್ರಿ ವಶಪಡಿಸಿಕೊಳ್ಳಲಾಗಿದೆ.ಗಾಂಧಿನಗರ ಠಾಣೆಯ ಪಿಐ ಸಿದ್ದರಾಮೇಶ್ವರ ಗಡಾದ ಮತ್ತವರ ಸಿಬ್ಬಂದಿ ಈ ದಾಳಿ ನಡೆಸಿ. ಪ್ರಕರಣ ದಾಖಲಿಸಿದೆ.ಬಲ್ಲ ಮೂಲಗಳ ಪ್ರಕಾರ ಇನ್ನಬ್ಬರನ್ನು ಈ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದರು. ಆದರೆ ಆನಂತರ ಬಿಡಲಾಗಿದೆಂದು ತಿಳಿದು ಬಂದಿದೆ.

ಈ ಖೋಟಾ ನೋಟು ಮುದ್ರಣ ಯಾವಾಗಿನಂದ ಆರಂಭಗೊಂಡಿದೆ. ಇವನ್ನು ಎಲ್ಲಿ ಚಲಾಚಣೆ ಮಾಡುತ್ತಿದ್ದರು. ಬ್ಯಾಂಕ್ ಬರೋಡದಲ್ಲಿಯೇ ಇತರೇ ನೋಟುಗಳ ಜೊತೆ ಸೇರಿಸುತ್ತಿದ್ದರೆ. ಇದರ ಹಿಂದೆ ಮತ್ತ್ಯಾರು ಇದ್ದಾರೆಂಬುದನ್ನು ಪೊಲೀಸರೇ ತನಿಖೆಯ ಮೂಲಕ ಹೊರ ಹಾಕಬೇಕಿದೆ.


# ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು-ವೆಂಕಟೇಶ್ ಹೆಗಡೆ



ಬಳ್ಳಾರಿ ಏ : ಸವಿಂದಾನ ಶಿಲ್ಪಿ, ಭಾರತರತ್ನ, ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರು ಜನ್ಮದಿನದಂದು ಅವರ ಪುತ್ತಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ನಮನಗಳನ್ನು ಸಲ್ಲಿಸಿದರು, ಈ ಸಂದರ್ಭದಲ್ಲಿ ವೆಂಕಟೇಶ್ ಹೆಗಡೆಯುವರು ಮಾತನಾಡುತ್ತಾ ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು. ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು. ಹೆಣ್ಣು ಮಕ್ಕಳ ಮೇಲೆ ಮದುವೆಯನ್ನು ಹೇರಬಾರದು. ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರಬೇಕು. ಆಕೆ ಗಂಡನ ಗುಲಾಮಳಾಗಬಾರದು. ಮಹಿಳೆಗೆ ಅವಳದ್ದೇ ಆದ ಸ್ವಾತಂತ್ರ್ಯವಿದೆ, ಹೀಗೆ ಹಲವು ವಿಚಾರಗಳನ್ನು ತಮ್ಮ ಬದುಕು, ಬರಹ, ಭಾಳಣಗಳಲ್ಲಿ ಪ್ರತಿಪಾದಿಸಿದ್ದ ಮಹಾನ್ ಚೇತನ ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರ ಇಂದು ಅವರ ಜನ್ಮದಿನದ ಹಿನ್ನೆಲೆಯಲ್ಲಿ ಅವರನ್ನು ಮತ್ತೊಮ್ಮೆ ಸ್ಮರಿಸುತ್ತಾ, ಹಾಗೂ ನಮ್ಮ ಜೀವನದದ್ದೂಕ್ಕೂ ಅವರ ಆದರ್ಶ, ತತ್ವಗಳನ್ನು ಅಳವಡಿಸಿಕೊಂಡು ಮುಂದೆ ಸಾಗೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದವರು ಕುಡತಿನ ನಾಗರಾಜ್, ಬಿ ಎಂ ಪಾಟೀಲ್, ಎಚ್ ಮಹಮ್ಮದ್ ಗೌಸ್,ಜಿ.ಜೆ ರವಿಕುಮಾರ್, ದೇವೇಂದ್ರ ಆನಂದ್,ರಾಜು,ಅನಿಲ್,ಶಶಿಕುಮಾರ್‌ಗೌಡ,ಶಿವು,ಜಿಲಾನ್,ಮುಂತಾದವರು ಉಪಸ್ಥಿತರಿದ್ದರು.

# ಎಪಿಎಂಸಿ ತರಕಾರಿ ವರ್ತಕರ ಸಂಘದಿಂದ ಅಂಬೇಡ್ಕರ್ ಜಯಂತಿ ಅದ್ಧೂರಿ ಆಚರಣೆ



ಬಳ್ಳಾರಿ ಏ :. ಬಳ್ಳಾರಿ ನಗರದ ಎಪಿಎಂಸಿಯಲ್ಲಿನ ಹೋಲ್‌ಸೇಲ್ ತರಕಾರಿ ವರ್ತಕರ ಸಂಘದಿಂದ ದಿನಾಂಕ 14.04.2024 ಭಾನುವಾರರಂದು ಭಾರತ ರತ್ನ ಸಂವಿಧಾನ ಶಿಲ್ಪಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 133ನೇಯ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಡಾಕ್ಟರ್ ಬಿ ಆರ್ ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವುದರ ಮೂಲಕ ನಮನಗಳನ್ನು ಸಲ್ಲಿಸಿದರು,

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು. ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು. ಮಹಿಳೆಗೆ ಅವಳದ್ದೇ ಆದ ಸ್ವಾತಂತ್ರ್ಯವಿದೆ, ಹೀಗೆ ಹಲವು ವಿಚಾರಗಳನ್ನು ತಮ್ಮ ಬದುಕು, ಬರಹ, ಭಾಳಣಗಳಲ್ಲಿ ಪ್ರತಿಪಾದಿಸಿದ್ದ ಮಹಾನ್ ಚೇತನ ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರ ಇಂದು ಅವರ ಜನ್ಮದಿನದ ಹಿನ್ನೆಲೆಯಲ್ಲಿ ಅವರನ್ನು ಮತ್ತೊಮ್ಮೆ ಸ್ಮರಿಸುತ್ತಾ, ಹಾಗೂ ನಮ್ಮ ಜೀವನದದ್ದೂಕ್ಕೂ ಅವರ ಆದರ್ಶ, ತತ್ವಗಳನ್ನು ಅಳವಡಿಸಿಕೊಂಡು ಮುಂದೆ ಸಾಗೋಣ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಎಲ್ಲಾ ವರ್ತಕರು ಮತ್ತು ದಲ್ಲಾಳಿಯರು,ತರಕಾರಿ ಹಮಾಲಿಯರು ,ಚಿಲ್ಲರೆ ವ್ಯಾಪಾರಸ್ಥರು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.